ಆದ್ದರಿಂದ ಸರ್ಕಾರ ಈ ಬಗ್ಗೆ ಗಮನ ಕೊಟ್ಟು ಶೀಘ್ರಗತಿಯಲ್ಲಿ ಅವರಿಗೆ ಬೇಕಾದ ನೀರು, ವಿದ್ಯುತ್ ಒದಗಿಸಿದಲ್ಲಿ ಊರ ಒಳಗೆ ಇರುವ ಕೈಗಾರಿಕೆಗಳು ಅಲ್ಲಿಗೆ ಹೋಗಲು ಸಹಾಯಕವಾಗುತ್ತದೆ. ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಸ್.ಆರ್. ಬೊಮ್ಮಾಯಿ.—೧೯೭೯-೮೦ ರಲ್ಲಿ ೧೯ ಎಕರೆ ಜಮೀನನ್ನು ಸರ್ಕಾರ ಕೊಂಡು ಕೊಂಡಿತು. ಇದು ಊರಿನಿಂದ ಸುಮಾರು ೪-೫ ಮೈಲಿ ದೂರದಲ್ಲಿತ್ತು. ಈಗ ದಾವಣಗೆರೆ ನಗರ ಬೆಳೆದಿರುವುದರಿಂದ ಆ ಜಾಗ ನಗರಕ್ಕೆ ಬಹಳ ಹತ್ತಿರವಿರುವಂತೆ ಕಾಣುತ್ತಿದೆ ನೀರನ್ನು ಒದಗಿಸುವುದಕ್ಕೆ ಈಗಾಗಲೇ ನಮ್ಮ ಇಲಾಖೆಯವರು ೭ ಲಕ್ಷ ರೂಪಾಯಿಗಳನ್ನು ತುಂಬಿದ್ದಾರೆ. ದಾವಣಗೆರೆ ನಗರದಿಂದ ನೀರು ಕೊಡುವುದಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ.

ಶ್ರೀ ಪಂಪಾಪತಿ.—ಎಷ್ಟು ದಿನಗಳಲ್ಲಿ ನೀರನ್ನು ಒದಗಿಸುತ್ತೀರಿ?

ಶ್ರೀ ಎಸ್ ಆರ್. ಬೊಮ್ಮಾಯಿ.—ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡ್‌ನವರಿಗೆ ಹಣ ಕೊಡಲಾಗಿದೆ. ಅವರು ಆದಷ್ಟು ಬೇಗ ನೀರು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಕೊಟ್ಟ ೧೩ ಶೆಡ್‌ಗಳಲ್ಲಿ ಕೇವಲ ಇಬ್ಬರು ಪ್ರಾರಂಭ ಮಾಡಿದ್ದಾರೆಂದು ಹೇಳಿದಿರಿ. ನೀವು ಅವರಿಗೆ ನೀರು ಕೊಡದಿದ್ದುದರಿಂದ ಬೇರೆಯವರು ಪ್ರಾರಂಭ ಮಾಡದೇ ಇರಬಹುದು. ಅಥವಾ ಅವರ ಹಣ ಹೂಡಿಕೆ ಇಲ್ಲದಿದ್ದುದರಿಂದಲಾದರೂ ಅವರು ಪ್ರಾರಂಭ ಮಾಡದೇ ಇರಬಹುದು. ಇದರಲ್ಲಿ ಮೊದಲನೆಯದು ನಿಜವಾದರೆ ನಿಮ್ಮದು ತಪ್ಪಾಗುತ್ತದೆ. ಎರಡನೆಯದು ನಿಜವಾದರೆ ಅವರದು ತಪ್ಪಾಗುತ್ತದೆ. ಇದಕ್ಕೆ ಕಾರಣ ಏನು?

ಶ್ರೀ ಎಸ್.ಆರ್. ಬೊಮ್ಮಾಯಿ.—ಎರಡೂ ಇದೆ ಸ್ವಾಮಿ. ಸರ್ಕಾರ ಒದಗಿಸಬೇಕಾದ ನೀರು ಮತ್ತು ವಿದ್ಯುತ್ತನ್ನು ಒದಗಿಸದೇ ಇರುವುದೂ ಇದೆ ಮತ್ತೆ ಕೆಲವರು ತಾವೇ ಕೆಲಸ ಪ್ರಾರಂಭ ಮಾಡದೇ ಬಿಟ್ಟುಕೊಂಡಿದ್ದಾರೆ. ಈ ಶೆಡ್‌ಗಳನ್ನು ಪ್ರಾರಂಭ ಮಾಡುವಾಗಲೇ ನೀರು ಮತ್ತು ವಿದ್ಯುತ್ ಕೊಡುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಆದರೆ ಇವನ್ನು ಈ ಮುಂಚೆಯೇ ತೆಗೆದೇ ಕೊಂಡಂತಹವುಗಳಾಗಿವೆ. ಆದ್ದರಿಂದ ಇವಕ್ಕೆ ನೀರು ಮತ್ತು ವಿದ್ಯುತ್ ಕೊಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಪಂಪಾಪತಿ.—ಈ ೨೦ ಶೆಡ್‌ಗಳನ್ನು ನಿರ್ಮಾಣ ಮಾಡಿ ಎಷ್ಟು ವರ್ಷಗಳಾದವು?

ಶ್ರೀ ಎಸ್.ಆರ್. ಬೊಮ್ಮಾಯಿ.—ನಿರ್ಮಾಣವಾಗಿ ೪ ವರ್ಷಗಳಾದವು.

ಶ್ರೀ ಪಂಪಾಪತಿ.—೪ ವರ್ಷದಿಂದ ಅಲ್ಲಿ ಸರ್ಕಾರ ಹಣ ಹೂಡಿ ಅವು ಹಾಗೇ ಇವೆ. ಈ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಸರ್ಕಾರ ಇಲ್ಲಿ ಕೆಲಸ ಪ್ರಾರಂಭ ಆಗುವ ಬಗ್ಗೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಕಳೆದ ೪ ವರ್ಷದಿಂದ ನೀರು ಮತ್ತು ವಿದ್ಯುತ್ ಕೊಡುವ ಪ್ರಯತ್ನ ಮಾಡಲಾಗಿದೆ ಆದರೆ ಆಗಿಲ್ಲ. ಆದಷ್ಟು ಬೇಗ ಇವನ್ನು ಒದಗಿಸುವುದಕ್ಕೆ ಪ್ರಯತ್ನ ಪಡುತ್ತೇವೆ.

ಉಪಾಧ್ಯಕ್ಷರು.—ಇಷ್ಟಿಗೆ ಪ್ರಶ್ನೋತ್ತರದ ವೇಳೆ ಮುಗಿಯಿತು.

ವಿಷಯ.—ಕೃಷ್ಣ ಮೇಲ್ದಂಡ್ ಯೋಜನೆ.

ಪ್ರಶ್ನೆ ೩೭ ಶ್ರೀ ಬಾಪ್ಪಗೌಡ ದರ್ಶನಪುರ (ಶಹಪುರ) ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕೃಷ್ಣ ಮೇಲ್ದಂಡ್ ಯೋಜನೆಯ ಮೊದಲನೆಯ ಮತ್ತು ಎರಡನೆಯ ಹಂತದ ಒಟ್ಟು ವೆಚ್ಚ.

ಆ) ಕೃಷ್ಣ ಮೇಲ್ದಂಡ್ ಯೋಜನೆ ಮೊದಲನೆ ಹಂತದ ಮೊದಲನೆ ಮಜಲಿನ ಕೆಲಸ ಕಾರ್ಯಗಳನ್ನು ವಿಶ್ವಬ್ಯಾಂಕ್ ನೆರವಿನಿಂದ ಸರ್ಕಾರವು ಕೈಗೊಂಡಿರುವುದು ನಿಜವೇ.

ಇ) ಹಾಗಾದರೆ ಈ ಯೋಜನೆಗೆ ವಿಶ್ವಬ್ಯಾಂಕ್ ನೆರವು ನೀಡುವ ಒಟ್ಟು ಸಹಾಯ ಧನ.

ಈ) ವಿಶ್ವಬ್ಯಾಂಕ್‌ನೊಡನೆ ಮಾಡಿಕೊಂಡ ಒಪ್ಪಂದದ ಪ್ರಕಾರ ಈ ಕೆಲಸಗಳನ್ನು ಯಾವಾಗ ಪೂರೈಸಬೇಕು ?

ಉ) ಮೊದಲನೆ ಹಂತದ ಮೊದಲನೆ ಮಜಲಿನ ನಿರ್ಮಾಣ ಕಾರ್ಯದಲ್ಲಿ ತಡವಾಗಿರುವುದು ನಿಜವೆ?

ಊ) ಹಾಗಾದರೆ ಕಾರಣಗಳೇನು ಮತ್ತು ಇದು ವಿಶ್ವಬ್ಯಾಂಕ್‌ನೊಡನೆ ಮಾಡಿಕೊಂಡ ಒಪ್ಪಂದ ಭಗ್ನವಾದಂತೆ ಆಗುವುದಿಲ್ಲವೇ?

ಋ) ಮೊದಲನೆ ಹಂತದ ಮೊದಲನೆ ಮಜಲಿನ ನಿರ್ಮಾಣ ಪೂರ್ಣಗೊಳ್ಳುವವರೆಗೂ ವಿಶ್ವ ಬ್ಯಾಂಕ್ ಹೆಚ್ಚು ನೆರವನ್ನು ಪಡೆಯಲು ಸರ್ಕಾರವು ಕೈಗೊಂಡ ಕ್ರಮಗಳು.

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು)

ಅ) ಡಿಸೆಂಬರ್ ೧೯೭೮ ರಲ್ಲಿ ಮಂಜೂರಾತಿ ಕೊಟ್ಟಂತೆ ಕೃಷ್ಣ ಮೇಲ್ದಂಡ್ ಯೋಜನೆ ಮೊದಲನೆ ಹಂತದ ಅಂದಾಜು ವೆಚ್ಚ ರೂ. ೨೮೩.೬೫ ಕೋಟಿ. ಸರ್ಕಾರಕ್ಕೆ ಬಂದ ವರದಿಯ ಪ್ರಕಾರ ಇದರ ಪರಿಷ್ಕೃತ ಅಂದಾಜಿನ ವೆಚ್ಚ. ರೂ. ೧೦೩೯.೭೧ ಕೋಟಿ (ರೂ. ೨೬೦.೧೩ ಕೋಟಿ ಕಾಡಾ ಅಂಗವೂ ಸೇರಿ) ಎರಡನೆಯ ಹಂತದ ಅಂದಾಜು ವೆಚ್ಚವನ್ನು ಇನ್ನೂ ನಿರ್ಧರಿಸಿಲ್ಲ.

ಆ) ಹೌದು.

ಇ) ರೂ. ೧೦೮ ೩೬ ಕೋಟಿ.

ಈ) ಮಾರ್ಚ್ ೧೯೮೩.

ಉ) ಹೌದು.

ಊ) ನಿರ್ಮಾಣ ಕಾರ್ಯದಲ್ಲಿ ತಡವಾದುದಕ್ಕೆ ಕಾರಣಗಳು ಈ ರೀತಿ ಇವೆ.

(೧) ನಾರಾಯಣಪುರ ಅಣೆಕಟ್ಟಿನ ಪ್ರವಾಹ ನಿಯಂತ್ರಣ ವಿನ್ಯಾಸದಲ್ಲಿ ಆದ ಮಾರ್ಪಾಡು.

(೨) ಅಲಮಟ್ಟಿ ಅಣೆಕಟ್ಟಿನ ವಿನ್ಯಾಸದಲ್ಲಿ ಆದ ಮಾರ್ಪಾಡು.

(೩) ಭೂಸ್ವಾಧೀನ ಕ್ರಮದಲ್ಲಿ ಆದ ವಿಳಂಬ ಮತ್ತು

(೪) ಕಂಟ್ರಾಕ್ಟ್‌ದಾರರು ತಮ್ಮ ತಕರಾರುಗಳನ್ನು ಪಂಚಾಯ್ತಿಗೆ ಕೊಂಡೊಯ್ದು ಮತ್ತು ನ್ಯಾಯಾಲಯಗಳಲ್ಲಿ ಹೂಡಿ ಕೆಲಸಗಳನ್ನು ಸ್ಥಗಿತಗೊಳಿಸಿದ್ದು; ಮತ್ತು

(೫) ಸಾಕಷ್ಟು ಸಿಬ್ಬಂದಿ ವರ್ಗ ಇಲ್ಲದೇ ಇದ್ದುದು.

ಮೇಲೆ ತಿಳಿಸಿದ ಸಕಾರಣಗಳಿಂದಾಗಿ ವಿಶ್ವಬ್ಯಾಂಕ್‌ನೊಡನೆ ಆದ ಒಪ್ಪಂದಕ್ಕೆ ಭಗ್ನವಾಗುವುದಿಲ್ಲ.

ಋ) ವಿಶ್ವಬ್ಯಾಂಕ್‌ನಿಂದ (೧) ಜಾಸ್ತಿ ನೆರವನ್ನು ಪಡೆಯಲು (೨) ಇನ್ನೂ ಕೆಲವು ಕಾಮಗಾರಿಗಳಿಗೆ ನೆರವಿನ ವ್ಯಾಪ್ತಿಯನ್ನು ವಿಸ್ತರಿಸಲು ಮತ್ತು (೩) ಒಪ್ಪಂದದ ಕಾಲವನ್ನು ಮಾರ್ಚ್ ೧೯೮೩ ರಿಂದ ಇನ್ನೆರಡು ವರ್ಷ ಮುಂದುವರೆಸುವ ಬಗ್ಗೆಯೂ ಈಗಾಗಲೆ ಕೇಂದ್ರ ಸರ್ಕಾರದೊಡನೆ ವ್ಯವಹರಿಸಲಾಗಿದೆ.